# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 07.08.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.37 ಯಶವಂತಪುರ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.37ರ ವಾರ್ಡ್ ಕಛೇರಿ, ಮಾಡೆಲ್ ಕಾಲೋನಿ, 2ನೇ ಅಡ್ಡರಸ್ತೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಎನ್. ಜಿ. ಉಮೇಶ್ | ಸಹಾಯಕ ಅಭಿಯಂತರರು | ಸದಸ್ಯರು | ಹಾಜರಿದ್ದರು |
| 3 | ಡಾ|| ಹರ್ಷಿತ್ | ಕೋವಿಡ್ ವೈದ್ಯಾಧಿಕಾರಿಗಳು | ಸದಸ್ಯರು | ಹಾಜರಿದ್ದರು |
| 4 | ಸುಜಾತಾ | ಹಿರಿಯ ಆರೋಗ್ಯ ಪರಿವೀಕ್ಷಕರು | ಸದಸ್ಯರು | ಹಾಜರಿದ್ದರು |
| 5 | ಗೋವಿಂದರಾಜು ಕೆ. | ಕಂದಾಯ ವಸೂಲಿಗಾರರು ಸ.ಕಂ.ಅ. (ಯಶವಂತಪುರ) | ಸದಸ್ಯರು | ಹಾಜರಿದ್ದರು |
| 6 | ಚನ್ನೇಶಪ್ಪ | ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ | ಸದಸ್ಯರು | ಹಾಜರಿದ್ದರು |
| 7 | ಅನಿಲ್ ಕುಮಾರ್ ಎಂ. | ಸಹಾಯಕ ಅಭಿಯಂತರರು, ಬೆಸ್ಕಾಂ | ಸದಸ್ಯರು | ಹಾಜರಿದ್ದರು |
| 8 | ಸುಜಾತಾ | ಲಿಂಕ್ ವರ್ಕರ್ | ಸದಸ್ಯರು | ಹಾಜರಿದ್ದರು |
| 9 | ಸತ್ಯವತಿ | ಲಿಂಕ್ ವರ್ಕರ್ | ಸದಸ್ಯರು | ಹಾಜರಿದ್ದರು |
| 10 | ಶಿವಪ್ರಕಾಶ್ ಎಂ. | ಬಿ.ಎಲ್.ಓ. ಹೋಂ ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 11 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 12 | ಬಿ. ಜಾನ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

1) ಬಿಡಬ್ಲ್ಯೂಎಸ್‌ಎಸ್‌ಬಿ:-

ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಹಾಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಪ್ರಸ್ತುತ ಚಾಲ್ತಿಯಲ್ಲಿರುವ ಬೋರ್‌ವೆಲ್‌ಗಳ ಹಾಗೂ ರಸ್ತೆ ಅಗೆತದ ವಿವರಗಳನ್ನು ಸಲ್ಲಿಸಲು ಹಾಗೂ ದುರಸ್ತಿಯಲ್ಲಿರುವ ಮ್ಯಾನ್‌ಹೋಲ್ ವಿವರಗಳನ್ನು ಸಲ್ಲಿಸಲು ಸಭೆಯಲ್ಲಿ ತಿಳಿಸಿದರು.

4) ಬೆಸ್ಕಾಂ ಇಲಾಖೆ:

ವಾರ್ಡ್ ವ್ಯಾಪ್ತಿಯಲ್ಲಿರುವ ವಿವಿಧ ಬಿಬಿಎಂಪಿ ಕಟ್ಟಡಗಳಾದ ಸಮುದಾಯ ಭವನ, ಆರ್‌ಓ ಪ್ಲಾಂಟ್‌ಗಳು, ಕೋವಿಡ್ ಆಸ್ಪತ್ರೆಗಳಲ್ಲಿ ವಿದ್ಯುತ್ ಬಿಲ್ಲುಗಳನ್ನು ಪಾವತಿ ಮಾಡದೇ ಇರುವುದನ್ನು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಾದ ಅನಿಲ್ ಕುಮಾರ್ ರವರು ತಿಳಿಸಿದರು. ಅದರಂತೆ, ಮಾನ್ಯ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಬಿಬಿಎಂಪಿ ಸಹಾಯಕ ಅಭಿಯಂತರರಿಗೆ ಸದರಿ ಬಿಲ್ಲುಗಳನ್ನು ಯೋಜನಾ ವಿಭಾಗ, ರಾ ರಾ ನಗರ ವಲಯರವರ ಕಛೇರಿಗೆ ಸಲ್ಲಿಸಲು ಸೂಚಿಸಿದರು.

3) ಆರೋಗ್ಯ ಇಲಾಖೆ:-

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಕೋವಿಡ್ ಲಸಿಕೆಯನ್ನು ಹಾಕಲು ತೀರ್ಮಾನಿಸಿದ್ದು, ಅದರಂತೆ, ಆರೋಗ್ಯ ಇಲಾಖೆ ಸಿಬ್ಬಂದಿಗಳು ಆರೋಗ್ಯ ಅಧಿಕಾರಿಗಳ ಸಹಾಯದಿಂದ ಹಾಗೂ ಆರೋಗ್ಯ ಸ್ವಯಂ ಸೇವಕರ ಸಹಾಯದಿಂದ ಕೋವಿಡ್ ಲಸಿಕೆಯನ್ನು ಹಾಕಲು ಸೂಚಿಸಿದರು.

ಕೋವಿಡ್ ಲಸಿಕೆ ಪಡೆಯಲು ಹಿಂಜರಿಯವ ಸಾರ್ವಜನಿಕರಿಗೆ ಆರೋಗ್ಯ ಜಾಗೃತಿಯನ್ನು ಮೂಡಿಸಿ, ಕೋವಿಡ್ ಸೋಂಕು ಹರಡದಂತೆ ಕ್ರಮವಹಿಸಲಾಗಿರುತ್ತದೆ.

ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು ಹೆಚ್ಚು ಆಟೋಗಳು ಜಮಾವಣೆಯಾಗುತ್ತಿರುವ ಆರೋಗ್ಯ ಸಿಬ್ಬಂದಿಗಳು ಸಭೆಯಲ್ಲಿ ದೂರು ನೀಡಿದರು. ಇದರಿಂದಾಗಿ ಸಾರ್ವಜನಿಕರಿಗೆ ಓಡಾಡುವುದಕ್ಕೆ ಬಹಳ ತೊಂದರೆಯಾಗುತ್ತಿರುವುದು ಕಂಡುಬಂದಿದ್ದು, ಸದರಿ ದೂರಿನ ಕುರಿತು ಪೋಲಿಸ್ ಇಲಾಖೆಯವರಿಗೆ ಹಾಗೂ ವಾರ್ಡ್ ಮಾರ್ಷಲ್‌ಗಳಿಗೆ ಕ್ರಮವಹಿಸಲು ಸೂಚಿಸಲಾಯಿತು.

4) ಕಸದ ಸಮಸ್ಯೆ ಬಗ್ಗೆ:

ಮಳೆಯಿಂದಾಗಿ ಅನ್‌ಲೋಡ್ ಆಗದೆ ಕಾಂಪ್ಯಾಕ್ಟರ್‌ಗಳು ಡಂಪಿಂಗ್ ಯಾರ್ಡ್‌ನಲ್ಲೇ ಇರುವುದರಿಂದ, ವಾರ್ಡ್ ಕಸದ ಪಾಯಿಂಟ್‌ಗಳು ಭರ್ತಿಯಾಗಿದ್ದು, ಕಸ ವಿಲೇವಾರಿಯಾಗಿರುವುದಿಲ್ಲ. ಇದರ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ

ಗುರುವಾರದೊಳಗೆ ಕಸ ವಿಲೇವಾರಿ ಮಾಡಿ, ಕಸದ ಪಾಯಿಂಟ್‌ಗಳನ್ನು ತೆರವುಗೊಳಿಸಿ, ಮಾನ್ಯ ಅಧ್ಯಕ್ಷರಿಗೆ ವರದಿ ನೀಡಲು ಸೂಚಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿರುವ ಬ್ಲ್ಯಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಲು ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎನ್. ಜಿ. ಉಮೇಶ್)
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಾರ್ಡ್ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ಸಂಖ್ಯೆ:37